ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

**File No:** DTE-ADMI0ACM2/60/2022

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು - 560 001.
ದಿನಾಂಕ:21-02-2023.

**-:: ಸು ತ್ತೋ ಲೆ ::-**

**ವಿಷಯ:** 2022–23ನೇ ಶೈಕ್ಷಣಿಕ ಸಾಲಿನ ಹಗಲು ಪಾಲಿಟೆಕ್ನಿಕ್‌ಗಳ 02, 04, 06 ಮತ್ತು ಪಾರ್ಟ್–ಟೈಂ 03 & 05 ನೇ ಸೆಮಿಸ್ಟರ್ ತರಗತಿಗಳ ಪ್ರಾರಂಭ ದಿನಾಂಕವನ್ನು ಮುಂದೂಡಿರುವ ಬಗ್ಗೆ.

**ಉಲ್ಲೇಖ:-** ಈ ಕಛೇರಿ ಸುತ್ತೋಲೆ ಸಂ. DTE-ADMI0ACM2/60/2022, ದಿ:29-08-2022.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಡಿಪ್ಲೋಮಾ ಕಾಲೇಜುಗಳಲ್ಲಿ 2022–23ನೇ ಶೈಕ್ಷಣಿಕ ಸಾಲಿನ ಹಗಲು ಮತ್ತು ಪಾರ್ಟ್-ಟೈಂ ಡಿಪ್ಲೋಮಾ ತರಗತಿಗಳನ್ನು ಪ್ರಾರಂಭಿಸಲು ತಾತ್ಕಾಲಿಕ ಶೈಕ್ಷಣಿಕ ವೇಳಾಪಟ್ಟಿಯನ್ನು ನಿಗಧಿಗೊಳಿಸಲಾಗಿತ್ತು. ಮುಂದುವರೆದು, ಫೆಬ್ರವರಿ-2023 ರ ಡಿಪ್ಲೋಮಾ ಸೆಮಿಸ್ಟರ್ ಥಿಯರಿ ಪರೀಕ್ಷೆಗಳು ವೇಳಾಪಟ್ಟಿಯಂತೆ ದಿನಾಂಕ:24-02-2023 ರಂದು ಕೊನೆಗೊಳ್ಳುತ್ತದೆ. ಆದುದರಿಂದ ಶೈಕ್ಷಣಿಕ ವೇಳಾಪಟ್ಟಿಯಲ್ಲಿನ **ಹಗಲು ಪಾಲಿಟೆಕ್ನಿಕ್ ಗಳ 02, 04 & 06 ನೇ ಸೆಮಿಸ್ಟರ್ ಮತ್ತು ಪಾರ್ಟ್ ಟೈಂ ಡಿಪ್ಲೊಮಾ ತರಗತಿಗಳ 03 & 05 ನೇ ಸೆಮಿಸ್ಟರ್ ಡಿಪ್ಲೊಮಾ ತರಗತಿಗಳ ಪ್ರಾರಂಭ ದಿನಾಂಕ:20-02-2023ರ** ಬದಲಾಗಿ **<u>ದಿನಾಂಕ:27-02-2023ರಂದು ಪ್ರಾರಂಭಿಸಲು</u>** ಈ ಮೂಲಕ ತಿಳಿಸಲಾಗಿದೆ. ಈ ವಿಷಯವನ್ನು ವಿದ್ಯಾರ್ಥಿಗಳು / ಉಪನ್ಯಾಸಕರು / ಪೋಷಕರುಗಳ ಗಮನಕ್ಕೆ ತರುವಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ. ಉಳಿದಂತೆ, ಉಲ್ಲೇಖಿತ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

**ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.**

21/02/2023

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಇವರಿಗೆ,

*ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ – ಅನುಸರಣೆಗಾಗಿ ಮತ್ತು ಸೂಚನಾಫಲಕದಲ್ಲಿ ಪ್ರಕಟಿಸಲು.*

<u>ಪ್ರತಿ:–</u>

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಜಂಟಿ ನಿರ್ದೇಶಕರು(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ಇ–ಆಡಳಿತ ವಿಭಾಗಕ್ಕೆ – ಸದರಿ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ರಿಜಿಸ್ಟ್ರಾರ್(ಪರೀಕ್ಷೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
7. ಕಛೇರಿ ಪ್ರತಿ.